ಶ್ರೀ ಎಂ.ಎಚ್. ಜಯಪ್ರಕಾಶ್ ನಾರಾಯಣ್ : ಶೇಕಡಾವಾರು ಕೊಟ್ಟಿದ್ದಾರೆಯೇ ಹೊರತು ಯಾವ ಕಾಲೇಜಿನಲ್ಲಿ ಎಲ್ಲಿ ಬ್ಯಾಕ್‌ಲಾಗ್ ವೇಕೆನ್ಸಿ ಎಷ್ಟಿದೆ ಎನ್ನತಕ್ಕ ಇನ್‌ಫರ್‌ಮೇಷನ್ ನಿಮ್ಮ ಇಲಾಖೆಯವರು ಒದಗಿಸಿಲ್ಲ. ಬೋಧಕ ವರ್ಗ ಎಷ್ಟಿದೆ? ಯಾವ ಯಾವ ವರ್ಗ ಎಷ್ಟಿದೆ ಎಂಬುದರ ಪಟ್ಟಿ ಕೊಡಿ. ನನ್ನ ಖಚಿತವಾದ ಪ್ರಶ್ನೆಗೆ ಖಚಿತವಾದ ಉತ್ತರವನ್ನು ಒದಗಿಸಿಲ್ಲ. ದಯವಿಟ್ಟು ಮುಂದೆಯಾದರೂ ಅದನ್ನು ಒದಗಿಸಿಕೊಡಲಿಕ್ಕೆ ವಿರ್ಪಾಡು ಮಾಡಿ.

ಅಧ್ಯಕ್ಷರು : ನೀವು ಪರ್ಸೆಂಟೇಜ್ ಕೇಳಿದ್ದೀರಿ. ಅದನ್ನು ಒದಗಿಸಿದ್ದಾರೆ. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳು ದಯಮಾಡಿ ಮಾನ್ಯ ಸದಸ್ಯರಿಗೆ ಬೇಕಾದ ಹೆಚ್ಚುವರಿ ಮಾಹಿತಿಯನ್ನು ಒದಗಿಸಿಕೊಡಿ.

ಶ್ರೀ ಡಿ. ಮಂಜುನಾಥ್ : ಆಯಿತು ಒದಗಿಸುತ್ತೇನೆ.

ಆಂಗ್ಲೋ ಇಂಡಿಯನ್ನರಿಗೆ ಶಿಕ್ಷಣದಲ್ಲಿ ರಿಯಾಯಿತಿ

286 - ಶ್ರೀ ಜಿ.ಎ. ಫರ್ನಾಂಡೀಸ್ (ನಾಮನಿರ್ದೇಶಿತ) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಆಂಗ್ಲೋ ಇಂಡಿಯನ್ ಕೋಮಿನವರಿಗೆ ಪ್ರಸ್ತುತ ನೀಡಲಾಗುತ್ತಿರುವ ಸೌಲಭ್ಯಗಳು?

ಆ) ಮೂಲತಃ ಎಂದಿನಿಂದ ಈ ಸೌಲಭ್ಯಗಳನ್ನು ವಿಸ್ತರಿಸಲಾಗಿದೆ? ಈ ಸೌಲಭ್ಯದಿಂದ ಇದುವರೆವಿಗೂ ಎಷ್ಟು ಮಂದಿ ಆಂಗ್ಲೋಇಂಡಿಯನ್ ವಿದ್ಯಾರ್ಥಿಗಳು ಅನುಕೂಲ ಪಡೆದಿರುತ್ತಾರೆ?

ಇ) 1989 ರಿಂದ 1994ರವರೆಗೆ ಯಾವುದಾದರೂ ಹೆಚ್ಚುವರಿ ಸೌಲಭ್ಯವನ್ನು ಆಂಗ್ಲೋ ಇಂಡಿಯನ್ ಕೋಮಿನವರಿಗೆ ವಿಸ್ತರಿಸಲಾಗಿದೆಯೇ? ಹಾಗಿದ್ದಲ್ಲಿ ವಿವರಗಳನ್ನು ನೀಡಿ.

ಶ್ರೀ ಹೆಚ್.ಜಿ. ಗೋವಿಂದೇಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಕರ್ನಾಟಕದಲ್ಲಿ ರಾಜ್ಯದಲ್ಲಿ 1 ರಿಂದ 10ನೇ ತರಗತಿಯಲ್ಲಿ ವ್ಯಾಸಂಗ ಮಾಡುವ ಆಂಗ್ಲೋ ಇಂಡಿಯನ್ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದಿಂದ ಬೋಧನಾ, ಪ್ರಯೋಗಾಲಯ, ಗ್ರಂಥಾಲಯ ಪ್ರವೇಶ, ವಿಶೇಷ ವಾಚನಾಲಯ, ಶ್ರವಣ ದರ್ಶನ ಮತ್ತು ಕ್ರೀಡಾ ಶುಲ್ಕಗಳನ್ನು ಮರುಪಾವತಿ ಮಾಡಲಾಗುತ್ತಿದೆ.

1987-88ರಿಂದ ಜಾರಿಗೊಳಿಸಿದೆ.

ಪ್ರತಿವರ್ಷ ಪ್ರಯೋಜನ ಪಡೆದ ವಿದ್ಯಾರ್ಥಿಗಳ ಪಟ್ಟಿಯು ಈ ಕೆಳಕಂಡಂತೆ ಇದೆ.

ವರ್ಷ	ಸಂಖ್ಯೆ
1987-88	714
1988-89	1157
1989-90	983
1990-91	989
1991-92	683
1992-93	982
1993-94	997
1994-95	765

ಇ) ಇಲ್ಲ.

SRI J.A. FERNANDEZ : Mr. Speaker, Sir, very grateful to this Government for extending the facilities to the Anglo - Indian Community. However, I would request the Hon'ble Minister through you, Sir to kindly increase the budgetary allocation from 15 lakhs sto 25 lakhs in order to take care of pre-primary and post - metric reimbursment schemes.

ಶ್ರೀ ಹೆಚ್.ಕೆ. ಗೋವಿಂದೇಗೌಡ : ಮಾನ್ಯ ಸದಸ್ಯರ ಅಭಿಪ್ರಾಯ ನನಗೂ ಗೊತ್ತಾಗಿದೆ. ಅದಕ್ಕೆ ಅನುಗುಣವಾಗಿ ಯಾವ ಯಾವ ಸೌಲಭ್ಯದ ಅವಶ್ಯಕತೆ ಇದೆ ಅಥವಾ ಈಗಾಗಲೇ ಕೊಟ್ಟಿರತಕ್ಕ ಸೌಲಭ್ಯ ಕಡಿಮೆ ಇದೆ ಎಂದಾದರೆ ಅದನ್ನು ಯಾವ ರೀತಿ ಹೆಚ್ಚಿಸಬಹುದು ಎಂಬುದನ್ನು ಯೋಚನೆ ಮಾಡಿ ಇನ್‌ಕ್ರೀಸ್ ಮಾಡುವುದರ ಬಗ್ಗೆ ಸರಿಯಾದ ತೀರ್ಮಾನ ತೆಗೆದುಕೊಳ್ಳುತ್ತೇವೆ.

SRI J.A. FERNANDEZ : Will the Government take steps to have hostel facilities for the less fortunue members of the community?

MR. SPEAKER : That is a separate question. Please give a fresh notice.

ಮಹಿಳಾ ಪಾಲಿಟೆಕ್ನಿಕ್ ಶಿವಮೊಗ್ಗ ಕುರಿತು

74 - ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವಿಶ್ವಬ್ಯಾಂಕ್ ನೆರವಿನಿಂದ ಶಿವಮೊಗ್ಗದಲ್ಲಿ ಮಹಿಳಾ ಪಾಲಿಟೆಕ್ನಿಕ್ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಹೊಸ ಕಟ್ಟಡದ ಕೆಲಸ ಯಾವ ಹಂತದಲ್ಲಿದೆ, ಹಾಗೂ ಹೊಸ ಕಟ್ಟಡವನ್ನು ಯಾವಾಗ ಪ್ರಾರಂಭಿಸಲಾಗುವುದು?

ಶ್ರೀ ಡಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.

ಆ) ಹೊಸ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೇಂದ್ರ ಸರ್ಕಾರ ಸ್ವಾಧೀನದ "ರೈಟ್ಸ್" ನಿರ್ಮಾಣ ಸಂಸ್ಥೆಗೆ ವಹಿಸಲಾಗಿದೆ. ಈ ನಿರ್ಮಾಣ ಕಾರ್ಯಕ್ಕೆ ಟೆಂಡರ್‌ಗಳನ್ನು ಪಡೆದಿದ್ದು, ಕನಿಷ್ಠ ಟೆಂಡರ್ ಒಪ್ಪಿಗೆಗಾಗಿ ವಿಶ್ವಬ್ಯಾಂಕ್‌ಗೆ ಸಲ್ಲಿಸಲಾಗಿದೆ.

ಶ್ರೀ ಅಂಗ ಜ್ಞಾನೇಂದ್ರ (ಶ್ರೀ ಕೆ.ಎಸ್. ಈಶ್ವರಪ್ಪನವರ ಪರವಾಗಿ) : ಮಾನ್ಯ ಅಧ್ಯಕ್ಷರೇ, ಶಿವಮೊಗ್ಗದಲ್ಲಿ ಮಹಿಳಾ ಪಾಲಿಟೆಕ್ನಿಕ್‌ಗೋಸ್ಕರ ಈಗಾಗಲೇ ಸ್ಥಳ ಕೊಟ್ಟಾಗಿದೆ. ಹಣ ಮಂಜೂರಾಗಿದೆ. ಪಾಲಿಟೆಕ್ನಿಕ್ ನಿರ್ಮಿಸಲು ಕೇಂದ್ರ ಸರ್ಕಾರದ ಸ್ವಾಧೀನದಲ್ಲಿರುವತಹ ರೈಟ್ಸ್ ನಿರ್ಮಾಣ ಸಂಸ್ಥೆಗೆ ವಹಿಸಲಾಗಿದೆ ಎಂದು ಹೇಳಿದ್ದೀರಿ. ರೈಟ್ಸ್ ನಿರ್ಮಾಣ ಸಂಸ್ಥೆಗೆ ವಹಿಸಿದ ನಂತರ ಮತ್ತ ಟೆಂಡರ್ ಕರೆದಿದ್ದಾರೆ. ಆ ಟೆಂಡರ್ ಕರೆದಂತಹ ತಾರೀಖು ಯಾವುದು? ಅದನ್ನು ಫೈನಲ್ ಮಾಡುವಂತಹ ತಾರೀಖು ಯಾವುದು? ಪಾಲೀಟೆಕ್ನಿಕ್‌ನ್ನು ಸದ್ಯದಲ್ಲೇ ಪ್ರಾರಂಭ ಮಾಡುತ್ತೀರೋ? ಇಷ್ಟರವರೆಗೂ ಕೆಲಸವೇ ಪ್ರಾರಂಬ ಮಾಡಲಿಲ್ಲ ಅಂದರೆ ಏನರ್ಥ? ಎಷ್ಟು ದಿನಗಳಿಂದ ಹಣ ಹಾಗೆಯೇ ಬಿದ್ದಿದೆ. ನಿಮ್ಮ ಸರ್ಕಾರದ ಕಡೆಯಿಂದ ನಮ್ಮ ಜಿಲ್ಲೆಯ ಒಂದು ಹೆಸರಾಂತ ಸಂಸ್ಥೆಯನ್ನು ಜರೂರಾಗಿ ಕಟ್ಟಬೇಕಾಗಿದೆ.

ಶ್ರೀ ಡಿ. ಮಂಜುನಾಥ್ : ನಾವು ವಿಶ್ವಬ್ಯಾಂಕ್‌ಗೆ ಅಪ್ರೂವಲ್‌ಗಾಗಿ ಕಳುಹಿಸಿದ್ದೇವೆ. ವಿಶ್ವಬ್ಯಾಂಕ್‌ನವರಿಂದ ಅಪ್ರೂವ್ ಆಗಿ ಬಂದ ತಕ್ಷಣ ಕೆಲಸ ಪ್ರಾರಂಭಿಸುತ್ತೇವೆ. ವಿಶ್ವಬ್ಯಾಂಕ್ ಕಛೇರಿ ದೆಹಲಿಯಲ್ಲಿ ಇದೆ. ನಾವು ಈಗಾಗಲೇ ಒಬ್ಬ ಅಧಿಕಾರಿಯನ್ನೂ